# ಕುಸುರೆಳ್ಳು ಆಭರಣ

## ಸೌಂದರ್ಯದ ಮರುಪೂರಣ






ಸಂಕ್ರಾಂತಿ ಹಬ್ಬದಲ್ಲಿ ಕುಸುರೆಳ್ಳು ಆಭರಣಗಳನ್ನು ವಿಶೇಷವಾಗಿ ಮಕ್ಕಳು ಮತ್ತು ಮಹಿಳೆಯರು ಧರಿಸಿ ಸಂಭ್ರಮಿಸುತ್ತಾರೆ. ಇವುಗಳನ್ನು ಎಳ್ಳು, ಅಕ್ಕಿ ಹಿಟ್ಟು, ಸಕ್ಕರೆ ಮತ್ತು ಹಲ್ವ ಬಳಸಿ ತಯಾರಿಸಲಾಗುತ್ತದೆ.

■ **ಪೂರ್ಣಿಮಾ ಗೊಂದೆನಾಯ್ಕರ**

ಚಿತ್ರ: ಗೋವಿಂದರಾಜ ಜವಳಿ

ಸಂಕ್ರಾಂತಿ, ಶಿಶಿರ ಋತು (ಚಳಿಗಾಲ) ಅಂತ್ಯವಾಗಿ ವಸಂತ ಋತುವಿನ ಆಗಮನದ ಸಂಕೇತ. ಸಂಕ್ರಾಂತಿಯಂದು ಸೂರ್ಯ ತನ್ನ ಪಥ ಬದಲಿಸುತ್ತಾನೆ. ಈ ಹಬ್ಬದಂದು ವಿವಿಧ ಬಗೆಯ ಖಾದ್ಯಗಳ ರುಚಿ ನಾಲಿಗೆಗೆ ಖುಷಿ ಕೊಟ್ಟರೆ, ಸಂಕ್ರಾಂತಿಯಂದು ಕಡ್ಡಾಯವಾಗಿ ಮಾಡುವ ಕುಸುರೆಳ್ಳು ಪ್ರೀತಿ ಹಂಚುವ ಜೊತೆಗೆ ಮಕ್ಕಳ ಆಭರಣವಾಗಿ ಅಂದವನ್ನೂ ಹೆಚ್ಚಿಸುತ್ತದೆ.

ಹೌದು, ಕುಸುರೆಳ್ಳು ನಮ್ಮ ಸಾಂಪ್ರದಾಯಿಕ ಆಹಾರ ಪದ್ಧತಿಯ ಪ್ರತೀಕ. ಸಂಕ್ರಾಂತಿಗೆ ಕುಸುರೆಳ್ಳು ಮಾಡಿ ಅಕ್ಕಪಕ್ಕದ ಮನೆಯವರಿಗೆ, ಸ್ನೇಹಿತರಿಗೆ, ಸಂಬಂಧಿಕರಿಗೆ ಹಂಚುವ ಖುಷಿಯೊಳಗೆ ಪರಸ್ಪರರೆಡೆಗೆ ವೃದ್ಧಿಯಾಗುವ ಪ್ರೀತಿ ಬದುಕಿಗೆ ಹೊಸ ಉಲ್ಲಾಸವೂ ಅಡಗಿದೆ. ಈ ಪ್ರೀತಿ ಹಬ್ಬಿಸುವ ಕುಸುರೆಳ್ಳಿನಿಂದ ಕಿರಿಯರಿಂದ ಹಿರಿಯರವರೆಗೂ ಆಭರಣಗಳನ್ನೂ ತಯಾರಿಸಲಾಗುತ್ತದೆ.



ಸಂಕ್ರಾಂತಿಯ ರಥಸಪ್ತಮಿಯಂದು ಮಕ್ಕಳಿಗೆ ಹೊಸ ಬಟ್ಟೆ ತೊಡಿಸಿ, ಕುಸುರೆಳ್ಳಿನಿಂದ ತಯಾರಿಸಿದ ಕಿರೀಟ, ಸೊಂಟದಪಟ್ಟಿ, ಬಾಜುಬಂಧಿ, ಹಾರ... ಹೀಗೆ ಕುಸುರೆಳ್ಳಿನ ಆಭರಣವನ್ನು ತೊಡಿಸಿ ಮಕ್ಕಳಿಗೆ ಪೂಜೆ ಮಾಡಲಾಗುತ್ತದೆ. ಚಿಕ್ಕ ಮಕ್ಕಳ ಮೇಲೆ ಹಾಲು, ಹಣ್ಣು, ಚುರುಮರಿಯನ್ನು ಸುರಿದು ಅಭಿಷೇಕ ಮಾಡುವ ಸಂಪ್ರದಾಯವೂ ಉತ್ತರ ಕರ್ನಾಟಕ ಭಾಗದಲ್ಲಿದೆ. ಇದಕ್ಕೆ ಕರಿ ಎರಿಯುವುದು ಎನ್ನಲಾಗುತ್ತದೆ. ಮಗುವಿನ ಆರೋಗ್ಯ ವೃದ್ಧಿಸಲಿ, ಜೀವನದಲ್ಲಿ ಯಶಸ್ಸು ಕಾಣಲಿ ಎಂದು ಹಾರೈಸುವುದು ಇದರ ಹಿಂದಿರುವ ಪ್ರಮುಖ ಆಶಯ. ಮಗುವಿನ ಮೊದಲ ಸಂಕ್ರಾಂತಿಯಂದು ಮಗುವಿಗೆ ಕರಿ ಎರೆಯುವ ಸಂಪ್ರದಾಯ ಆಚರಿಸುವುದು ಹಿರಿಯರಿಂದಲೇ ಬಂದಿದೆ.

ಧಾರವಾಡದ ಮಾಳಮಡ್ಡಿಯಲ್ಲಿರುವ ಆನಂದ ಕೋಟಿ ಎಂಬುವವರು ಸುಮಾರು 40 ವರ್ಷಗಳಿಂದ ಈ ಕುಸುರೆಳ್ಳಿನಿಂದ ಮಕ್ಕಳಿಗೆ ತೊಡಿಸಲು ಆಭರಣಗಳನ್ನು ತಯಾರಿಸುತ್ತಾರೆ. ಇದಕ್ಕೆಂದೇ ಸ್ವತಃ ಅವರೇ ಮನೆಯಲ್ಲಿ ಕುಸುರೆಳ್ಳು ತಯಾರಿಸುತ್ತಾರೆ. ಪ್ರತಿ ಬಾರಿ ಸಂಕ್ರಮಣದ ಸಂದರ್ಭದಲ್ಲಿ ಅವರು ಸಾಂಪ್ರದಾಯಿಕ ಶೈಲಿಯಲ್ಲಿ ನೆಕ್ಲೇಸ್, ಸರ, ಬ್ರೇಸ್ಲೆಟ್, ಬಳೆ, ಉಂಗುರ, ಕಿವಿಯೋಲೆ, ಮಂಗಳಸೂತ್ರ, ಸೊಂಟದ ಪಟ್ಟಿ, ಕಿರೀಟ ಮುಂತಾದವುಗಳನ್ನು ಕಿರಿಯರಿಂದ ಹಿರಿಯರವರೆಗೆ ಎಲ್ಲರಿಗೂ ಸಿಹಿ ಖಾದ್ಯದಲ್ಲೇ ಸಿದ್ಧಪಡಿಸಿಕೊಡುತ್ತಾರೆ. ಕುಸುರೆಳ್ಳು ಆಭರಣಗಳನ್ನು ವಿಶೇಷವಾಗಿ ಮಕ್ಕಳು ಮತ್ತು ಮಹಿಳೆಯರು ಧರಿಸಿ ಸಂಭ್ರಮಿಸುತ್ತಾರೆ. ಇವುಗಳನ್ನು ಎಳ್ಳು, ಅಕ್ಕಿ ಹಿಟ್ಟು, ಸಕ್ಕರೆ ಮತ್ತು ಹಲ್ವ ಬಳಸಿ ತಯಾರಿಸಲಾಗುತ್ತದೆ. ಕುಸುರೆಳ್ಳು ಆಭರಣಗಳು ಸಂಕ್ರಾಂತಿ ಹಬ್ಬಕ್ಕೆ ವಿಶೇಷವಾದ, ಸಾಂಪ್ರದಾಯಿಕ ಆಭರಣಗಳಾಗಿದ್ದು, ಹಬ್ಬದ ಆಚರಣೆಗೆ ಹೊಸ ಕಳೆ ತರುತ್ತವೆ.

### ಮನೆಯಲ್ಲಿಯೇ ತಯಾರಾಗುವ ಕುಸುರೆಳ್ಳು

ಆನಂದ ಅವರು ಸ್ವತಃ ಮನೆಯಲ್ಲಿಯೇ ಕುಸುರೆಳ್ಳು ತಯಾರಿಸುವುದು ವಿಶೇಷ. ಒಂದು ಕಪ್ ಹಾಲು, ಬಿಳಿ ಎಳ್ಳು ಮತ್ತು ಅಡುಗೆಗೆ ಬಳಸುವ ವಿವಿಧ ಬಣ್ಣಗಳ ಪೌಡರ್‌ಗಳನ್ನು ಬಳಸಿ ತಯಾರಿಸುತ್ತಾರೆ. ಯಾವುದೇ ಚಮಚ ಬಳಸದೆ, ಕೈಯಿಂದಲೆ ಕುಸುರೆಳ್ಳು ತಯಾರಿಸುತ್ತಾರೆ. ಮನೆಯಲ್ಲಿಯೇ ಕುಸುರೆಳ್ಳು ತಯಾರಿಸಿದರೇ ಆಭರಣ ಮಾಡಲು ಸಹಕಾರಿ ಆಗುತ್ತದೆ. ಒಂದೇ ಅಳತೆಯ ಕುಸುರೆಳ್ಳು ಸಿಗುವುದರಿಂದ ಆಭರಣದ ಅಂದ ಹೆಚ್ಚಿಸುತ್ತದೆ ಎಂಬುದು ಅವರ ಅಭಿಪ್ರಾಯವಾಗಿದೆ. ‘ಈ ಆಭರಣಗಳನ್ನು ಸಂಕ್ರಮಣದಲ್ಲಷ್ಟೇ ಬಳಸಲಾಗುತ್ತದೆ. ಸರಿಯಾದ ರೀತಿ ಬಳಸಿದರೆ, ನಾಲ್ಕೈದು ವರ್ಷಗಳವರೆಗೆ ಬಾಳಿಕೆ ಬರುತ್ತವೆ. ಆಭರಣಗಳ ದರ ₹500 ರಿಂದ ₹2 ಸಾವಿರದ ವರೆಗೆ ಇದೆ’ ಎಂದು ಅವರು ಹೇಳುತ್ತಾರೆ. ■

